ನಡುವೆ ಹತ್ತಿಪ್ಪತ್ತು ಮರದ ಮೆಟ್ಟಿಲನ್ನೇರಿ ಮೇಲೆ ಹೋದರೆ ಅಲ್ಲೊಂದು ದೊಡ್ಡ ಕೋಣೆ. ಆ ಕೋಣೆಯ ನಡುವೆ ಉದ್ದನೆಯದೊಂದು ಸ್ಟೇಜು. ಅದರ ಸುತ್ತ ಗೋಡೆಗೆ ತಾಗಿ ಕುರ್ಚಿ ಟೇಬಲ್ಲುಗಳು. ಮಂಬಯಿಯಲ್ಲಿ ನೋಡಿದ ಫೈವ್‌ಸ್ಟಾರ್ ಖದರೇನೂ ಅಲ್ಲಿರಲಿಲ್ಲ. ಯಾವುದೂ ಖಾಸಗಿಯೆನ್ನಿಸುತ್ತಿರಲಿಲ್ಲ ಅಲ್ಲಿ. ಸ್ಟೇಜಿನ ಮೇಲೆ ಐದಾರು ಸ್ತ್ರೀಯರು ಅರೆಬೆತ್ತಲಾಗಿ ಏನೇನೋ ಪ್ರದರ್ಶನಗಳನ್ನು ನೀಡುತ್ತಿದ್ದರು. ಒಂದೊಂದು ಪ್ರದರ್ಶನದ ನಂತರವೂ ಸುತ್ತಲೂ ಮದ್ಯ ಹೀರುತ್ತ ಕುಳಿತ ಜನ ಚಪ್ಪಾಳೆ ತಟ್ಟಿ ಹುರಿದುಂಬಿಸುತ್ತಿದ್ದರು.

ನಾವು ಆಸೀನರಾದೊಡನೆ ಅತ್ಯದ್ಭುತವೆನ್ನಿಸುವ ಅಂಗ ಸೌಷ್ಟವದ, ತುಂಡುಡುಗೆ ತೊಟ್ಟ ಯುವತಿಯೊಬ್ಬಳು ನಮ್ಮ ಟೇಬಲ್ಲಿಗೆ ಬಂದು ಮೆನು ಕಾರ್ಡ್ ನೀಡಿದಳು. 'ಅವಳು ಹುಡುಗಿಯಲ್ಲ, **she is a ladyboy**' ಮೋ ಹೇಳಿದ. ನನಗೆ ಅತ್ಯಾಶ್ಚರ್ಯವಾಯಿತು. ನೋಡಲು ಥೇಟ್ ಹೆಂಗಸರಂತೇ ಕಾಣುವ ಆದರೆ ಹೆಣ್ಣು ಅಲ್ಲದ ಗಂಡೂ ಅಲ್ಲದ(**transgenders**) ಅವರುಗಳು ಅಲ್ಲೆಲ್ಲ ಓಡಾಡಿಕೊಂಡಿದ್ದರು. ಇವರದ್ದೇ ಒಂದು ಲೋಕವಿದೆ, ಥಾಯ್ಲೆಂಡಿನ ಸಮಾಜದ ಮುಖ್ಯವಾಹಿನಿಯಲ್ಲಿಯೇ ಅವರೂ ಬೆರೆತಿದ್ದಾರೆ ಎಂಬಂತ ಎಂದೂ ಕೇಳರಿಯದ ಅನೇಕ ವಿಷಯಗಳೆಲ್ಲ ತಿಳಿಸಿದ ಮೋ. ಕಲ್ಪನೆಗೂ ಮೀರಿದ ವಿಚಿತ್ರವನ್ನು ಅರಗಿಸಿಕೊಳ್ಳಲಾಗದೇ ನಾನು ದಿಗ್ಭ್ರಮೆಯಿಂದ ಅಲ್ಲಿ ನಡೆಯುತ್ತಿದುದನ್ನು ನೋಡುತ್ತಿರುವಾಗಲೇ, 'ನನಗೆ ಚಲಿಂಡಾ ಸಿಕ್ಕಿದ್ದು ಇಲ್ಲಿಯೇ' ಎಂದ ಮೋ. 'ಯಾರಿಂದಲೂ ಸಾಧ್ಯವಾಗದ ಅಪರೂಪದ ಶೋ ಒಂದನ್ನು ಆಕೆ ನೀಡುತ್ತಿದ್ದಳು. ಅಲ್ಲಿಂದಲೇ ನಾನು ಇಂಪ್ರೆಸ್ ಆಗಿ, ಮಾತು ಭೇಟಿ ಡೇಟಿಂಗ್ ಎಲ್ಲವೂ ಆಗಿ, ನಮ್ಮಿಬ್ಬರ ಸಂಬಂಧ ಈಗ ವರ್ಷಕ್ಕಿಂತಲೂ ಹೆಚ್ಚು ದಿನಗಳು ಒಟ್ಟಿಗೆ ವಾಸಿಸುವಲ್ಲಿಗೆ ಬಂದು ತಲುಪಿದೆ' ಎಂದ. ನನ್ನಲ್ಲಿ ಮಾತನಾಡಲು ಯಾವುದೇ ಶಬ್ದಗಳಿರಲಿಲ್ಲ. ಕೇಳುವ ಸಾಧ್ಯತೆಯಿದ್ದಿದ್ದರೆ 'ಆಕೆ ಈಗಲೂ ಶೋ ನೀಡ್ತಾಳೋ?' ಎಂದು ಕೇಳುತ್ತಿದ್ದೆನೇನೋ.

ಬ್ಯಾಂಕಾಕಿನಲ್ಲಿ ಇದ್ದಷ್ಟೂ ದಿನ ಮೋ ನನನ್ನು ಯಾವುದಾದರೂ ಕೃತ್ಯಕ್ಕೆ ಪ್ರಲೋಭಿಸುತ್ತಾನೇನೋ ಎಂದು ಕಾಯುತ್ತಲೇ ಇದ್ದೆ. ಆದರೆ ಆತ ಹಾಗೇನೂ ಮಾಡಲಿಲ್ಲ. ಒಂದುವೇಳೆ ಮಾಡಿದ್ದರೂ ನಾನು ಮುಂದುವರಿಯುತ್ತಿದ್ದೆನೇ ಎಂಬುದರ ಬಗ್ಗೆ ನನಗೇ ಸಂಶಯವಿತ್ತು.ಆದರೆ ಆ ಪ್ರಲೋಭನೆಗೆ ನನ್ನನ್ನು ಒಡ್ಡಿಕೊಳ್ಳುವ ಕ್ಷಣದ ರೋಮಾಂಚನವಂತೂ ನನಗೆ ಬೇಕಿತ್ತು. ಅಂದಿನ ಮುಂಬೈ ಘಟನೆಗೆ ಎರಡನೇ ಬಾರಿ ಪಶ್ಚಾತಾಪ ಪಟ್ಟಿದ್ದೆ ನಾನು.

ಬ್ಯಾಂಕಾಕಿನಲ್ಲಿ ನನ್ನ ಮನಸ್ಸಿಗೆ ವಿಕೃತಖುಷಿ ಕೊಟ್ಟ ಒಂದು ವಿಷಯವೆಂದರೆ ಅಲ್ಲಿಯ ವಾಹನ ದಟ್ಟಣೆ. ಅದು ಬೆಂಗಳೂರಿನ ಎರಡು ಪಟ್ಟಿತ್ತು! ಮೂರು ಕಿಲೋಮೀಟರುಗಳನ್ನು ಕ್ರಮಿಸಲು ಕೆಲವೊಮ್ಮೆ ಮೂರು ಗಂಟೆಗಳಿಗೂ ಹೆಚ್ಚು ಸಮಯ ತೆಗೆದುಕೊಳ್ಳುವ ರಸ್ತೆಗಳೂ ಅಲ್ಲಿವೆ ಎಂಬುದೂ ತಿಳಿದು ಬಂತು. ಬೆಂಗಳೂರಿನಲ್ಲಿ ಟ್ರಾಫಿಕ್ ಜಾಮ್ ಎಂದು ಸಿಟಿಯ ಒಳಗೇ ಬರದೇ ವಿಮಾನ ನಿಲ್ದಾಣದ ಅಕ್ಕಪಕ್ಕವೇ ಓಡಾಡಿಕೊಂಡಿರುವ ಮೋ ಇಲ್ಲೇನು ಮಾಡುತ್ತಾನೆ ಎಂಬ ಕುತೂಹಲವಿತ್ತು ನನಗೆ. 'ಇದು ಇಲ್ಲಿಯದೊಂದೇ ಪ್ರಾಬ್ಲೆಮ್ ಅಲ್ಲ. ಜಗತ್ತಿನ ಹಲವಾರು ಮಹಾನಗರಗಳಲ್ಲಿ ಇದೇ ಸಮಸ್ಯೆಯಿದೆ. ದುಬೈ, ಸಿಂಗಪುರ, ಶಾಂಘೈ, ಲಂಡನ್ ಎಲ್ಲಕಡೆ ನಾನೇ ನೋಡಿದ್ದೇನೆ, ಅಲ್ಲೂ ಇದೇ ಪಾಡು' ಆತನೆಂದ. 'ಹಾಗಾದರೆ ನೀನು ಕಾಲಿಟ್ಟಲ್ಲೆಲ್ಲ ಟ್ರಾಫಿಕ್ಕು ಜಾಮು ಎಂದಾಯಿತು, ವದ್ದಾ ವದ್ದಾss...' ಎನ್ನುತ್ತ ನನ್ನ ಜೋಕಿಗೆ ನಾನೇ ನಕ್ಕೆ. ಆತ ಮುಂದುವರಿಸುತ್ತ 'ಬೆಂಗಳೂರಿನದಕ್ಕೂ ಇಲ್ಲಿಯ ಟ್ರಾಫಿಕ್ಕಿಗೂ ಬಹಳೇ